

# ಕಳ್ಳರು

■ ಚೀಮನಹಳ್ಳಿ ರಮೇಶಬಾಬು

ಕಲೆ: ಎಸ್.ವಿ. ಹೂಗಾರ್

ಮುಂಜಾನೆ ಟೀವಿ ಚಾನಲ್ ಒಂದರಲ್ಲಿ ದಿನಭವಿಷ್ಯ ಕೇಳಿಸಿಕೊಳ್ಳುತ್ತಾ ಅಡುಗೆ ಮನೆ ಹೊಕ್ಕಿದ್ದ ರಮ್ಯ ಎಂತ ತಿಂಡಿ ಮಾಡೋದು ಎಂಬ ಗೊಂದಲಕ್ಕೆ ಒಳಗಾದಳು. ದಿನಭವಿಷ್ಯ ಹೇಳುತ್ತಿದ್ದವನು ತುಲಾರಾಶಿಯವರಿಗೆ ಸಂಜೆಯವರೆಗೂ ಗೊಂದಲಗಳ ಕಾಟವಿದ್ದು ಸೂರ್ಯಾಸ್ತದ ಹೊತ್ತಿಗೆ ಸಂತೋಷಕರ ಸುದ್ದಿಯಿಂದ ಸಂತೃಪ್ತರಾಗುತ್ತಾರೆ ಎಂದು ನುಡಿದಿದ್ದ. ಇವರು ಎಷ್ಟು ನಿಖರವಾಗಿ ಹೇಳುತ್ತಾರಲ್ಲವೆ ಎಂದುಕೊಳ್ಳುತ್ತಾ ಗಂಡನಿಗೆ 'ಏನ್ ತಿಂಡಿ ಮಾಡೋದು' ಎಂದು ಕೇಳಿದಳು. ಬಾತ್‌ರೂಮಿನಿಂದ 'ಏನಾದ್ರು ಒಂದು ಮಾಡಮ್ಮ... ನಂದೇನಿದೆ. ಮಕ್ಕಳು ಮುಖ್ಯ' ಎಂಬ ಶಾಂತ ಧ್ವನಿ ಹೊರಬಂತು. ಕ್ಯಾರೆಟ್ ಬೀನ್ಸ್ ಹೆಚ್ಚಾಕಿ ಉಪ್ಪಿಟ್ಟು ಮಾಡಿದರಾಯಿತು ಎಂದುಕೊಂಡಳು. ನಂತರ ದಿನಭವಿಷ್ಯದಂತೆ ತನಗೆ ಸಂಜೆಯ ವೇಳೆಗೆ ಒದಗಿ ಬರಲಿರುವ ಸಿಹಿಸುದ್ದಿ ಏನಿರಬಹುದು ಎಂದುಕೊಳ್ಳುತ್ತಾ ಫ್ರಿಜ್ಜಿನ ಬಾಗಿಲು ತೆಗೆದು ಕ್ಯಾರೆಟ್ ಮತ್ತು ಬೀನ್ಸ್ ಎತ್ತಿಕೊಂಡು ವಾಷ್‌ಬೇಸಿನ್ನಿನ ಬಳಿಗೆ ನಡೆದಳು. ವಾಷ್‌ಬೇಸಿನ್ನಿನ ತುಸು ಮೇಲಕ್ಕೆ ಇದ್ದ ಕಿಟಕಿಯ ಸರಳುಗಳು ಅವಳನ್ನು ಅಣಕಿಸತೊಡಗಿದವು. ತಾನೆ ಇಷ್ಟಪಟ್ಟು ಅಡುಗೆ ಮನೆಯಲ್ಲಿ ಕಿಟಕಿ ವಾಷ್‌ಬೇಸಿನ್ನಿನ ಮೇಲಕ್ಕೆ ಇರಲಿ ಎಂದು ಹಟಕ್ಕೆ ಬಿದ್ದು ಹಾಕಿಸಿದ್ದು. ಹಾಗೆ ನೋಡಿದರೆ ಆ ಮನೆಯ ಸಕಲವೂ ಅವಳ ಆಣತಿಯಂತೆಯೇ ಮೈದಳೆದಿರುವುದು. ತನ್ನ ತಂದೆ ತನಗೆಂದು ಕೊಟ್ಟಿರುವ ಸೈಟಿನಲ್ಲಲ್ಲವೆ ಮನೆ ಕಟ್ಟಿಸುತ್ತಿರುವುದು ಎಂಬ ಹಕ್ಕು ಸ್ಥಾಪನೆಯೂ ಅವಳ ನಿರ್ಧಾರಗಳಲ್ಲಿತ್ತು. ಮೊದಲೇ ಶಾಂತ ಸ್ವಭಾವದವನಾದ ಗಂಡ ಸುರೇಶ್ 'ನಿಂಗೆ ಹೇಗೆ ಬೇಕಾದ್ರು ಕಟ್ಟಿಸ್ಕೊ... ನಿನ್ನ ಮನೆಯಲ್ವೆ. ನಂಗೆ ಎರಡೊತ್ತು ಕೂಳು ಹಾಕು ಸಾಕು' ಎಂದು ನುಡಿದು ಸುಮ್ಮನಾಗಿದ್ದ. ಹಾಗೆ ತನ್ನ ಒತ್ತಾಸೆಯಂತೆ ತಲೆಯೆತ್ತಿ ನಿಂತಿರುವ ಆ ಮನೆಯ ಆ ಕಿಟಕಿ ಅವಳನ್ನು ಅಣಕಿಸಿದ ಹಾಗಾಗಿ ತಲೆ ತಗ್ಗಿಸಿ ತೊಳೆಯತೊಡಗಿದಳು. ಈ ಬಾರಿ ಯಾರದಾದರು ಮುಖಾಂತರ ವಾಸ್ತು ಸರಿಯಿಲ್ಲ ಎಂದು ಹೇಳಿಸಿ ಈ ಕಿಟಕಿಯನ್ನು ಅಡುಗೆ ಮನೆಯ ಮತ್ತೊಂದು ಬದಿಗೆ ಸ್ಥಳಾಂತರಿಸಬೇಕು ಎಂದುಕೊಂಡಳು.

ಆಚೆ ಬಾಗಿಲಿಗೆ ದಿನಪತ್ರಿಕೆ ದಬಾಳ್ ಎಂದು ಬಡಿದ ಸದ್ದಾಯಿತು. 'ಇವನೊಬ್ಬ ನೆಟ್ಟಗೆ ಪೇಪರ್ ಹಾಕಕ್ಕು ಬರಲ್ಲ; ಎಸೆದು ಹೋಗುತ್ತಾನೆ' ಎಂದು ಗೊಣಗಿಕೊಳ್ಳುತ್ತಾ ಆಚೆ ಬಂದಳು. ಹಣೆಗೆ ಮುತ್ತುತ್ತಿರುವ ಮುಂಗುರುಳನ್ನು ಎಡಗೈಯಿಂದ ಮೋಹಕವಾಗಿ ಪಕ್ಕಕ್ಕೆ ಎಳೆದು ಕಿವಿಗೆ ಸಿಕ್ಕಿಸುವ